

ಅವಮಾನ; ‘ಇನ್ನೂ ಕೆಲಸ ಸಿಕ್ಕಿಲ್ವಾ?’, ‘ಅಷ್ಟೇನಾ ಸಂಬಳ?’, ‘ಇನ್ನೂ ಮದುವೆ ಆಗಿಲ್ವಾ?’, ‘ಓ ಬಾಡಿಗೆ ಮನೇನಾ?’ ಎಂದು ನಾಗರಿಕರೆದುರು ಯಾರಾದರೂ ನಿಮ್ಮನ್ನು ಉದ್ದೇಶಿಸಿ ಮಾತನಾಡಿದಾಗ ಆಗುವ ಅವಮಾನ; ‘ಪುಲ್’ ಎಂದು ಬರೆದಿರುವ ಬಾಗಿಲನ್ನು ನೀವು ‘ಪುಶ್’ ಮಾಡಿ ಡುಬ್ಬೆಂದು ತಲೆಗೆ ಹೊಡೆಸಿಕೊಂಡಾಗ ಎಲ್ಲರೆದುರು ಆಗುವ ಅವಮಾನ – ಇಂಥವೆಲ್ಲಾ ವೈಯಕ್ತಿಕ ಅವಮಾನಗಳ ವ್ಯಾಪ್ತಿಗೆ ಬರುತ್ತವೆ. ಅದೇ ರೀತಿ ‘ನನ್ನ ಇಷ್ಟು ವರ್ಷದ ಸರ್ವಿಸ್ಸಿನಲ್ಲೇ ನಿಮ್ಮದು ವರ್ಸ್ಟ್ ಬ್ಯಾಚು’ ಎಂದು ಟೀಚರ್ ಇಡೀ ತರಗತಿಗೆ ಉಗಿದಾಗ ಆಗುವ ಅವಮಾನ, ‘ಕನ್ನಡ ಇಡೀ ಜಗತ್ತಿನ ಅಗ್ಲಿಯೆಸ್ಟ್ ಲಾಂಗ್ವೇಜ್’ ಎಂದು ಗೂಗಲ್ಲಿನಲ್ಲಿ ಬಂದಾಗ ಆದ ಅವಮಾನ, ಭಾರತ ಪಾಕಿಸ್ತಾನದೆದುರು ವಿಶ್ವಕಪ್ ಕ್ರಿಕೆಟ್‌ನಲ್ಲಿ ಹತ್ತು ವಿಕೆಟ್ಟುಗಳಿಂದ ಸೋತಾಗ ಆದ ಅವಮಾನ – ಇವೆಲ್ಲವೂ ಸಾಮೂಹಿಕ ಅವಮಾನದಡಿ ಬರುತ್ತವೆ. ವೈಯಕ್ತಿಕವಾಗಿ ಅವಮಾನವಾದಾಗ ನಿಮ್ಮನ್ನು ನೋಡಿ ನಕ್ಕವರೇ ಸಾಮೂಹಿಕ ಅವಮಾನದ ಸಂದರ್ಭದಲ್ಲಿ ನಿಮ್ಮ ಜೊತೆ ದುಃಖ ಹಂಚಿಕೊಳ್ಳಲು ನಿಲ್ಲುತ್ತಾರೆ. ಜಗತ್ತು ಈ ಅವಮಾನಗಳ ನಿಯಮಗಳನ್ನು ಸಾಕಷ್ಟು ಕ್ಲಿಷ್ಟವಾಗಿಸಿದೆ. ಮದುವೆಗೆ ಮುಂಚೆಯೇ ಮಕ್ಕಳನ್ನು ಹುಟ್ಟಿಸಿದರೆ ಅದು ಅವಮಾನ. ಮದುವೆಯಾದ ಮೇಲೆ ಮಕ್ಕಳನ್ನು ಹುಟ್ಟಿಸದಿದ್ದರೆ ಅದೂ ಅವಮಾನ. ಸಾವಿರಾರು ವರ್ಷಗಳ ಹಿಂದೆ ಎಲ್ಲ ಮನುಷ್ಯರೂ ಬೆತ್ತಲೆಯಾಗಿ ಓಡಾಡುತ್ತಿದ್ದರು. ಆಗ ಯಾರಾದರೂ ಸೂಟು ಧರಿಸಿ ಓಡಾಡಿದ್ದರೆ ಅವನನ್ನು ಅವಮಾನಿಸುತ್ತಿದ್ದರೇನೋ. ಈಗ ಎಲ್ಲರೂ ಬಟ್ಟೆ ಹಾಕಿಕೊಂಡು ಓಡಾಡುತ್ತಾರೆ. ಹಾಗಾಗಿ ಬೆತ್ತಲೆ ಓಡಾಡಿದರೆ ಅವಮಾನ. ಕಾಲಕ್ರಮೇಣ ಮಾನವನ ಜೊತೆಗೇ ಅವಮಾನದ ಸ್ವರೂಪಗಳೂ ಬದಲಾಗುತ್ತಿವೆ.

ಒಮ್ಮೆ ಒಂದು ಕೋಣ ಕೆಸರಲ್ಲಿ ಕುಳಿತು ಬಾಲವನ್ನು ಆಡಿಸುತ್ತಾ ಇತ್ತು. ಹೀಗೇ ಒಮ್ಮೆ ರಪ್ಪೆಂದು ಬಾಲವನ್ನು ಎತ್ತಿ ಹೊಡೆದಾಗ ಅದರ ಸುತ್ತಲೂ ಓಡಾಡುತ್ತಿದ್ದ ನೊಣಗಳಲ್ಲಿ ಯಾವುದೋ ಒಂದಕ್ಕೆ ಸರಿಯಾಗಿ ಏಟು ಬಿತ್ತು. ಆ ನೊಣಕ್ಕೆ ಸಿಟ್ಟು ತಡೆಯಲಾಗಲಿಲ್ಲ. ತಕ್ಷಣವೇ ಕೋಣದ ತಲೆ ಮೇಲೆ ಹೋಗಿ ಕುಳಿತು ಕೋಣವನ್ನು ಮನಸೋಇಚ್ಛೆ ಕಚ್ಚಿತು. ಅದರ ಸಿಟ್ಟೆಲ್ಲಾ ಇಳಿದ ಮೇಲೆ ಕೋಣದ ಬಗ್ಗೆ ಪಾಪ ಎನ್ನಿಸಿತು. ನಿಧಾನಕ್ಕೆ ಕೋಣದ ಕಿವಿಯ ಬಳಿ ಹೋಗಿ, ‘ನೀನು ನನಗೆ ಬಾಲದಲ್ಲಿ ಹೊಡೆದೆಯಲ್ಲಾ ಅದಕ್ಕೇ ನಾನು ನಿನಗೆ ಕಚ್ಚಿದ್ದು, ನನ್ನನ್ನು ಕ್ಷಮಿಸು’ ಎಂದಿತು. ಆಗ ಕೋಣ ಒಮ್ಮೆ ನೊಣದತ್ತ ನೋಡಿ ನಿಧಾನವಾಗಿ, ‘ತಪ್ಪು ತಿಳ್ಕೋಬೇಡ, ನಿಂಗೆ ನಾನು ಬಾಲದಲ್ಲಿ ಹೊಡೆದಿದ್ದೂ ನಂಗೆ ಗೊತ್ತಾಗ್ಲಿಲ್ಲ, ನೀನು ಕಚ್ಚಿದ್ದೂ ಗೊತ್ತಾಗ್ಲಿಲ್ಲ’ ಎಂದಿತಂತೆ. ಇದನ್ನು ಈಗೇಕೆ ಹೇಳಿದೆ ಎಂದರೆ, ನಿಮ್ಮ ಮನಸ್ಸು ಕೋಣದಷ್ಟು ಪ್ರಶಾಂತವಾಗಿದ್ದರೆ ಅವಮಾನಗಳೆಂಬ ಸಣ್ಣಪುಟ್ಟ ನೊಣಗಳು ಕಚ್ಚಿದ್ದು ಗೊತ್ತಾಗುವುದಿಲ್ಲ.

ಒಮ್ಮೆ ಸೋಮವಾರ ಬೆಳಗ್ಗೆ ನನ್ನ ಆಫೀಸಿನ ಶೂಗಳು ಕಳುವಾದವು. ಕ್ಯಾಬ್ ಬಂದು ಬಾಗಿಲೆದುರು ಕಾಯುತ್ತಿತ್ತು. ಬೇರೆ ದಾರಿಯಿಲ್ಲದೇ ಚಪ್ಪಲಿಗಳನ್ನು ಹಾಕಿಕೊಂಡು ಹೋದೆ. ಮಾಮೂಲಿಯಂತೆ ಕೆಲಸ ಮಾಡಿದೆ. ಇಡೀ ದಿನ ನನಗಂತೂ ತೀರಾ ಮಾಮೂಲಿಯಾಗಿತ್ತು. ಮಾರನೆಯ ದಿನ ಹೊಸಾ ಶೂಗಳನ್ನು ಧರಿಸಿ ಆಫೀಸಿಗೆ ಹೋದರೆ ‘ಮೀಟಿಂಗ್ ರೂಮಿನಲ್ಲಿ ಸಿಗೋಣ’ ಎಂಬ ಮ್ಯಾನೇಜರ್‌ನ ಇ–ಮೇಲ್ ನನ್ನನ್ನು ಸ್ವಾಗತಿಸಿತು. ಅಲ್ಲಿಗೆ ಹೋದಾಗಲೇ ಗೊತ್ತಾಗಿದ್ದು ನಾನು ಚಪ್ಪಲಿ ಹಾಕಿಕೊಂಡು ಬಂದಿದ್ದನ್ನು ನೋಡಿ ಯಾರೋ ನೇರ ವಿ.ಪಿ.ಗೇ ಇ–ಮೇಲ್ ಮಾಡಿ ಕಂಪ್ಲೇಂಟ್ ಮಾಡಿಬಿಟ್ಟಿದ್ದರು ಎಂದು. ನಾನು ಕೆಲಸ ಮಾಡುತ್ತಿದ್ದದ್ದು ಕ್ಲೈಯಂಟ್ ಜಾಗದಲ್ಲಿ. ಅಂದರೆ ಅವರ ಕಂಪನಿಗೆ ಬೇಕಾದ ಒಂದಷ್ಟು ಸಹಾಯ ಮಾಡಿಕೊಡಲು ನಮ್ಮ ಕಂಪನಿಯ ಜೊತೆಗೆ ಒಪ್ಪಂದವಾಗಿತ್ತು, ಹಾಗಾಗಿ ನಮ್ಮ ತಂಡ ಅಲ್ಲಿಗೇ ಹೋಗಿ ಕೆಲಸ ಮಾಡುತ್ತಿತ್ತು. ಅವರ ಕಂಪನಿಯೆದುರು ನಮ್ಮ ಕಂಪನಿಯ ಘನತೆ ಕಾಪಾಡುವುದು ನಮ್ಮ ಜವಾಬ್ದಾರಿಯಾಗಿತ್ತು. ಹೀಗಾಗಿ ಇದು ದೊಡ್ಡ ವಿಷಯವಾಗಿ ನಮ್ಮ ಕಂಪನಿಯ ಸಿಇಒ ಜೊತೆ, ಅವರ ಕಂಪನಿ ಸಿಇಒ ಖುದ್ದಾಗಿ ಮಾತನಾಡಿ ಕೊನೆಗೆ ಈ ವಿಷಯವನ್ನು ತುಂಬಾ ನಾಜೂಕಾಗಿ ನಿಭಾಯಿಸುವಂತೆ ಮ್ಯಾನೇಜರ್‌ಗೆ ಆದೇಶ ಕೊಟ್ಟಿದ್ದರು. ನನ್ನ ಚಪ್ಪಲಿಗಳಿಂದ ಇಡೀ ಕಂಪನಿಗೆ ಕಂಪನಿಯೇ ಅವಮಾನಕ್ಕೊಳಗಾಗಿತ್ತು, ಮತ್ತು ಅದು ನನಗೆ ಗೊತ್ತೂ ಆಗಿರಲಿಲ್ಲ! ಗೊತ್ತಾದ ಮೇಲೂ ನನ್ನ ಚಪ್ಪಲಿಗಳ ಸಾಮರ್ಥ್ಯದ ಬಗ್ಗೆ ಮೆಚ್ಚುಗೆಯಾಯಿತೇ ಹೊರತು ಮುಜುಗರವೇನೂ ಆಗಲಿಲ್ಲ. ಆಗುವುದಾಗಿದ್ದರೆ ಹಿಂದಿನ ದಿನವೇ ಆಗಬೇಕಿತ್ತು. ನಿನ್ನೆ ಚಪ್ಪಲಿ ಹಾಕಿಕೊಂಡು ಬಂದಿದ್ದಕ್ಕೆ ಇಂದು ಹೇಗೆ ಮುಜುಗರಪಟ್ಟುಕೊಳ್ಳುವುದು ಅಲ್ಲವೇ?

ನಮಗಾಗುವ ಅವಮಾನಗಳು ನಮಗೇ ಗೊತ್ತಾಗದಿರುವುದು ಒಂದೆಡೆಯಾದರೆ, ನಾವೇ ಇಲ್ಲದ ಅವಮಾನಗಳನ್ನು ತಲೆ ಮೇಲೆ ಎಳೆದುಕೊಳ್ಳುವುದು ಇನ್ನೊಂದು ಕಡೆ. ನಮ್ಮ ಊರಿನ ತಾಲ್ಲೂಕು ಕಚೇರಿಗೆ ಶ್ರೀನಿವಾಸ ಎಂಬುವವರೊಬ್ಬರು ಹೊಸದಾಗಿ ವರ್ಗವಾಗಿ ಬಂದಿದ್ದರು. ಅವರು ಹಿಂದೆ ಕೆಲಸ ಮಾಡಿದಲ್ಲೆಲ್ಲ ಅತ್ಯಂತ ನಿಷ್ಠಾವಂತರಾಗಿದ್ದರು ಎಂದು ಅವರ ಬಗ್ಗೆ ಜನ ಮಾತಾಡಿಕೊಳ್ಳುತ್ತಿದ್ದರು. ಅವರು ಬಂದವರೇ ತಾವು ಕೂರುವ ಟೇಬಲ್ ಹಿಂದೆ ಗೋಡೆಯ ಮೇಲೆ ‘ನಾನು ಲಂಚ ತೆಗೆದುಕೊಳ್ಳುವುದಿಲ್ಲ’ ಎಂದು ಬೋರ್ಡು ನೇತುಹಾಕಿದರು. ಅಲ್ಲಿಯವರೆಗೂ ಎಲ್ಲಾ ಸರ್ಕಾರಿ ಕಚೇರಿಗಳಂತೆ ನೀರಸವಾಗಿ ನಡೆದುಕೊಂಡು ಹೋಗುತ್ತಿದ್ದ ತಾಲ್ಲೂಕಾಫೀಸಿನಲ್ಲಿ ಇದ್ದಕ್ಕಿದ್ದಂತೆಯೇ ಚಟುವಟಿಕೆಗಳು ಶುರುವಾದವು. ಎಲ್ಲರಲ್ಲೂ ಏನೋ ಇರುಸುಮುರುಸು, ಏನೋ ಸಿಟ್ಟು, ಏನೋ ತಳಮಳ. ಕೊನೆಗೊಮ್ಮೆ ಉಳಿದೆಲ್ಲಾ ನೌಕರರೂ ಒಟ್ಟಾಗಿ ಆ ಬೋರ್ಡನ್ನು ತೆಗೆಯಬೇಕೆಂದು ಶ್ರೀನಿವಾಸರಿಗೆ ಒತ್ತಾಯಿಸಲು ಶುರು ಮಾಡಿದರು. ‘ನಾನು ಲಂಚ ತೆಗೆದುಕೊಳ್ಳುವುದಿಲ್ಲ’ ಎಂದು ನೀವು ಪ್ರತ್ಯೇಕವಾಗಿ ಬೋರ್ಡು ಹಾಕುವುದು ತಪ್ಪು, ಆಗ ನಿಮ್ಮನ್ನು ಬಿಟ್ಟು ಉಳಿದವರೆಲ್ಲಾ ಲಂಚ ತೆಗೆದುಕೊಳ್ಳುತ್ತೇವೆ ಎಂದು ಅರ್ಥವಾಗುತ್ತದೆ, ಇದರಿಂದ ನಮಗೆಲ್ಲಾ ಸಿಕ್ಕಾಪಟ್ಟೆ ಅವಮಾನವಾಗುತ್ತಿದೆ ಎಂಬುದು ಪ್ರತಿಭಟನಾಕಾರರ ವಾದ.

**ಅವಮಾನವನ್ನು ಪ್ರತಿಯೊಬ್ಬರೂ ಗಂಭೀರವಾಗಿ ತೆಗೆದುಕೊಂಡರೆ ಮಾತ್ರ ಛಲ, ಪ್ರತೀಕಾರ, ಕೆಚ್ಚು ಇದಕ್ಕೆಲ್ಲಾ ಅರ್ಥ ಸಿಕ್ಕಿ ಜಗತ್ತು ಮುಂದುವರೆಯುವುದು. ಇಲ್ಲದಿದ್ದರೆ ಎಲ್ಲವೂ ನೀರಸವಾಗಿರುತ್ತದೆ.**

‘ನಾನು ಲಂಚ ತಗೋಳಲ್ಲ ಅಂತ ಹಾಕಿದ್ದು, ಉಳಿದವರು ಲಂಚ ತಗೋತಾರೆ ಅಂತ ನಾನೆಲ್ಲಿ ಹಾಕಿದ್ದೀನಿ?’ ಅಂತ ಶ್ರೀನಿವಾಸರ ವಾದ. ಇವರೂ ಪಟ್ಟು ಬಿಡರು, ಅವರೂ ಪಟ್ಟು ಬಿಡರು. ತಹಸೀಲ್ದಾರರವರೆಗೆ ವಿಷಯ ಹೋಗಿ ಕೊನೆಗೆ ‘ಆ ರೀತಿ ಬೋರ್ಡು ಹಾಕಬಾರದೆಂದು ಸಂವಿಧಾನದಲ್ಲಿ ಎಲ್ಲೂ ಹೇಳಿಲ್ಲ’ ಎಂದು ಶ್ರೀನಿವಾಸರು ತಹಸೀಲ್ದಾರರಿಗೆ ಮನದಟ್ಟು ಮಾಡಿಸಿದ ಮೇಲೆ ತಹಸೀಲ್ದಾರರು ಉಳಿದವರಿಗೆಲ್ಲಾ ಬೈದು ಕಳಿಸಿದರು. ಉಳಿದವರೆಲ್ಲಾ ‘ನಿಮ್ಗೊಬ್ರಿಗೇ ಬೋರ್ಡು ಹಾಕೋಕೆ ಬರೋದಾ?, ನಾಳೆಯಿಂದ ನಾವೂ ಎಲ್ಲಾರೂ ಒಂದೊಂದು ಬೋರ್ಡು ತಂದು ಹಾಕ್ಕೊಂತೀವಿ’ ಎಂದು ಬಹಿರಂಗವಾಗಿಯೇ ಶ್ರೀನಿವಾಸರ ಮೇಲೆ ಕೂಗಾಡಿ ಹೋದರೂ ಎಲ್ಲಿ ಜನರು ಅದನ್ನು ಗಂಭೀರವಾಗಿಯೇ ತೆಗೆದುಕೊಂಡು ಲಂಚ ಕೊಡುವುದನ್ನು ನಿಲ್ಲಿಸಿಬಿಡುತ್ತಾರೋ ಎಂದು ಹೆದರಿ ಯಾರೊಬ್ಬರೂ ಅಂತಹಾ ಸಾಹಸ ಮಾಡಲಿಲ್ಲ ಬಿಡಿ!

ಅವಮಾನವನ್ನು ಎಲ್ಲರೂ ತುಂಬಾ ಋಣಾತ್ಮಕವಾಗಿ ನೋಡುತ್ತಾರೆ, ಆದರದು ಅತ್ಯಂತ ಧನಾತ್ಮಕ ವಿಷಯ. ಈಗ ಇಂದ್ರಪ್ರಸ್ಥದಲ್ಲಿ ದ್ರೌಪದಿ ನಕ್ಕಿದ್ದಕ್ಕೆ ದುರ್ಯೋಧನನೂ ಮರುನಕ್ಕು ಜೀವನದಲ್ಲಿ ಇಂಥದ್ದೆಲ್ಲಾ ಸಾಮಾನ್ಯ